**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಮಾಲೂರು**

**ಸಿಸಿ ನಂಃ 1087/2023**

**ಸಿಡಬೂಃ 1 ಪಿ ಡಬ್ಲ್ಯೂಃ 1**

**ಹೆಸರುಃ ಅಸ್ಲಂ ಖಾನ್**

**ತಂದೆ ಹೆಸರುಃ ಪ್ಯಾರೆ ಖಾನ್**

**ವಯಸ್ಸುಃ 48 ವರ್ಷ**

**ಉದ್ಯೋಗಃ ಖಾಸಗಿ ಕೆಲಸ**

**ವಾಸ ಸ್ಥಳಃ ಮಾಲೂರು**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 09.07.2026**

**ಮುಖ್ಯ ವಿಚಾರಣೆಃ ಮಾನ್ಯ ಸಸಅ**

ನ್ಯಾಯಾಲಯದ ಮುಂದೆ 1 ರಿಂದ 8 ನೇ ಆರೋಪಿ ಹಾಜರಿದ್ದು ಅವರ ಪರಿಚಯ ಇದೆ. 9 ನೇ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಾಗಿದ್ದು ಅವರ ಪರಿಚಯ ಇದೆ. ಆರೋಪಿ ಪರ ವಕೀಲರು 9 ನೇ ಆರೋಪಿಯ ಗುರುತಿನ ತಕರಾರು ಇರುವುದಿಲ್ಲ ಅಂತ ವಿನಾಯತಿ ಅರ್ಜಿ ಸಲ್ಲಿಸಿರುತ್ತಾರೆ.

ದಿಃ16.07.2023 ರಂದು ನಾನು ಮತ್ತು ನನ್ನ ತಮ್ಮ ಚಾಸಾ 2 ಬೆಂಗಳೂರು ರೋಡ್ ಹೊಸಕೋಟೆ ತಾಲ್ಲೂಕು ಮೆಟ್ರೊ ಛತ್ರದಲ್ಲಿ ಮದುವೆ ಇದ್ದು, ನಾವು ಅದಕ್ಕೆ ಹೋಗಿದ್ದು ಮ.2.30 ಗಂಟೆ ಸಮಯದಲ್ಲಿ ಆರೋಪಿ 1 ರಿಂದ 9 ರವರು ಅಲ್ಲಿ ಇದ್ದು ನಾವು ನಿಮ್ಮ ಮೇಲೆ ಜಮೀನಿಗಾಗಿ ಕೇಸ್ ಹಾಕಿದ್ದೇವೆ, ನೀವು ನಮ್ಮ ಜಮೀನಿನ ಬಳಿ ಬರಬಾರದು ಅಂತ ಹೇಳಿ ನಮಗೆ ಅವಾಚ್ಯ ಶಬ್ದಗಳಾದ ಸೂಳೆ ಮಗ, ಲೋಫರ್ ನನ್ನ ಮಗನೇ ಎಂದು ಬೈದು, ಬೆಂಗಳೂರಿನಿಂದ ಯಾರಿಗೋ ಕರೆಸಿ ಹೊಡೆಸುತ್ತೀವಿ ಅಂತ ಹೇಳಿ ನಿಮ್ಮ ಕತ್ತುಗಳು ಹಿಸುಕಿ ಜೀವ ತೆಗೆಯುತ್ತೇವೆ ಅಂತ ಜೀವ ಬೆದರಿಕೆ ಹಾಕಿದರು. ನಾವು ಅಲ್ಲಿ ಇದ್ದಾಗ 1 ನೇ ಆರೋಪಿ ನನಗೆ ಕಾಲಿನಿಂದ ಎದೆಗೆ ಎಲ್ಲಾ ಒದ್ದನು. ಚೌಟ್ರಿಯಲ್ಲಿದ್ದ ಜನ ಜಗಳ ಬಿಡಿಸಿ ನಮ್ಮನ್ನು ಅಲ್ಲಿಂದ ಕಳುಹಿಸಿದರು. ನಾವು ಊಟ ಸಹ ಮಾಡದೇ ವಾಪಸ್ಸು ಮಾಲೂರಿಗೆ ನಮ್ಮ ಗ್ಯಾರೇಜ್ ಕೆಲಸ ಮಾಡಲು ಬಂದು ಬಿಟ್ಟೆವು. ಅದೇ ದಿನ ಸಂಜೆ 5-5.15 ಕಾಲು ಗಂಟೆಗೆ

ನಾನು ನನ್ನ ತಮ್ಮ ಕೆಲಸ ಮಾಡುವಾಗ 1 ರಿಂದ 9 ನೇ ಆರೋಪಿಗಳು ಬಂದು ನಾನು ಮೋಟಾರು ಬಿಚ್ಚುತ್ತಿರುವಾಗ ನನಗೆ 2 ಮತ್ತು 3 ನೇ ಆರೋಪಿಗಳು ಹೊಡೆದರು. ರಾಡಿನಿಂದ ಹೊಡೆದರು. ಅವರು ನನ್ನ ಎಡಗೈಗೆ ಎರಡು ರಾಡುಗಳಿಂದ ಹೊಡೆದರು. ಅಲ್ಲಿ ನಮ್ಮನ್ನು ಹೊರತುಪಡಿಸಿ ಚಾಸಾ 3 ರವರು ಇದ್ದರು. ಚಾಸಾ 2 ರವರಿಗೂ ಸಹ ಆರೋಪಿ 2 ಮತ್ತು 3 ರವರು ರಾಡಿನಿಂದ ಬಲ ಕಾಲಿಗೆ ಹೊಡೆದಿದ್ದರಿಂದ ಅವರಿಗೂ ಸಹ ಗಾಯ ಆಯಿತು. ಚಾಸಾ 3 ಮತ್ತು 4 ರವರು ಜಗಳ ಬಿಡಿಸಿ ನಮ್ಮನ್ನು ಮಾಲೂರಿನ ಸ್ಪಂದನಾ ಆಸ್ಪತ್ರೆಗೆ ಕಳುಹಿಸಿಕೊಟ್ಟರು.

ದೂರನ್ನು ನಾನು ದಿಃ16.07.2023 ರ ಸಂಜೆ ಸುಮಾರು 7.30 ಇಂದ 8 ಗಂಟೆ ಸುಮಾರಿಗೆ ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ್ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ನಾನು ದಿಃ17.07.2023 ರಂದು ನಮ್ಮ ಗ್ಯಾರೇಜ್ ನಲ್ಲಿ ಮಾಡಿರುತ್ತೇನೆ. ನಿಪಿ-2 ಬರೆಯುವ ಕಾಲದಲ್ಲಿ ಪೊಲೀಸರು 2 ರಾಡ್ ಗಳನ್ನು ವಶಕ್ಕೆ ಪಡೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ 2 ರಾಡ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಎಂಓ-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ, ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/-**
**(ಶ್ರೀಮತಿ ಗಾಯತ್ರಿ)**
**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ. ದಂ.ಗಳು**
**ಮಾಲೂರು**